ಮಿನಿ ಸಿಮೆಂಟ್ ಕಾರ್ಖಾನೆಗಳ ಪುನಶ್ಚೇತನ

೨೭೧ (೭೦೮) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮಿನಿ ಸಿಮೆಂಟ್ ಕೈಗಾರಿಕಾ ಕಾರ್ಖಾನೆಗಳ ಪುನಃಶ್ಚೇತನದ ಆಶ್ವಾಸನೆ ಕಾರ್ಯಗತ ಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು ?

ಆ) ಇದುವರೆವಿಗೂ ಯಾವುದೇ ಸೌಲಭ್ಯಗಳು ದೊರೆಯದೆ ಮಿನಿ ಸಿಮೆಂಟ್ ಕಾರ್ಖಾನೆಗಳು ಲಭ್ಯವಿಲ್ಲದಿರುವುದು ಸರ್ಕಾರಕ್ಕೆ ಅರಿವಾಗಿದೆಯೇ ?

ಇ) ಹಾಗಿದ್ದಲ್ಲಿ ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಬರುವ ಸಿಮೆಂಟ್ ಕಾರ್ಖಾನೆಗಳನ್ನು ಪುನಃ ಶ್ಚೇತನಗೊಳಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಲಿಂಗಾ ರೆಡ್ಡಿ (ಭೂರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು). —

ಅ) ಈ ಮಿನಿ ಸಿಮೆಂಟ್ ಕಾರ್ಖಾನೆಗಳು ಈ ಕೆಳಕಂಡ ರಿಯಾಯಿತಿಗಳನ್ನು : ಸವಲತ್ತು ಗಳನ್ನು ರಾಜ್ಯ ಸರ್ಕಾರದಿಂದ ಕೋರಿರುತ್ತವೆ.

೧) ಮಿನಿ ಸಿಮೆಂಟ್ ಕೈಗಾರಿಕೆಗಳು ಗ್ರಾಮಾಂತರ ವಿದ್ಯುತ್ ತಂತಿಗಳಿಂದ ವಿದ್ಯುತ್ ಪಡೆಯುವುದರಿಂದ ಈ ಘಟಕಗಳಿಗೆ ವಿದ್ಯುತ್ ಕಡಿತದಿಂದ ಸಂಪೂರ್ಣ ವಿನಾಯಿತಿ ನೀಡುವುದು ಹಾಗೂ ಕನಿಷ್ಠ ಶೇಕಡ ೬೦ ರಷ್ಟು ಉತ್ಪಾದನೆಯನ್ನು ಸಾಧಿಸಲು ಬೇಕಾದ ವಿದ್ಯುತನ್ನು ಒದಗಿಸುವುದು.

೨) ಕೇಂದ್ರ ಸರ್ಕಾರದಿಂದ ಈಗಾಗಲೇ ಮಿನಿ ಸಿಮೆಂಟ್ ಕೈಗಾರಿಕೆಗಳಿಗೆ ನೀಡಿರುವ ಸೆಂಟ್ರಲ್ ಎಕ್ಸ್‌ಸೈಜ್ ತೆರಿಗೆ ವಿನಾಯಿತಿಯ ಪ್ರಮಾಣದಲ್ಲಿ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

೩) ಸಣ್ಣ ಕೈಗಾರಿಕಾ ರಂಗಕ್ಕೆ ಸೇರಿದ ಮಿನಿ ಸಿಮೆಂಟ್ ಕೈಗಾರಿಕೆಗಳಿಗೆ ಈಗಾಗಲೇ ಶೇಕಡ ೧೫ ರಷ್ಟು ಬಿಸಿದಿ ದರ ಹೆಚ್ಚಳ ಸೌಲಭ್ಯವನ್ನು ನೀಡಲಾಗುತ್ತದೆ. ಅದೇ ರೀತಿ ಮಿನಿ ಸಿಮೆಂಟ್ ಕೈಗಾರಿಕೆಗಳಿಗೆ ಸರ್ಕಾರೀ ಬಿರೀದಿಯಲ್ಲಿ ಕನಿಷ್ಠ ಬಿರೀದಿ ಪ್ರಮಾಣ ಅಧ್ಯತೆ ಯನ್ನು ನೀಡುವುದು.

೪) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ವಾಣಿಜ್ಯ ತೆರಿಗೆ ಇಲಾಖೆಗೆ ಮಿನಿ ಸಿಮೆಂಟ್ ಘಟಕಗಳಿಂದ ಪಾವತಿ ಮಾಡಬೇಕಾದ ಬಾಕಿಯನ್ನು ಸೂಕ್ತ ಕಂತುಗಳಲ್ಲಿ ಪಾವತಿ ಮಾಡಲು ಅವಕಾಶ ಮಾಡಿಕೊಡುವುದು.

೫) ತಾಂತ್ರಿಕ ಆಧುನೀಕರಣವನ್ನು ಅಳವಡಿಸುವ ಮಿನಿ ಸಿಮೆಂಟ್ ಕಾರ್ಖಾನೆಗಳಿಗೆ ಸೂಕ್ತ ರಿಯಾಯಿತಿಗಳನ್ನು ನೀಡುವುದು.

೬) ಮೂರು ವರ್ಷಗಳ ಅವಧಿಗೆ ಮಾರಾಟ ತೆರಿಗೆಯನ್ನು ಕಡಿಮೆಗೊಳಿಸುವುದು.

ಈ ಬೇಡಿಕೆಗಳು ಸರ್ಕಾರದ ಪರಿಗಣನೆಯಲ್ಲಿವೆ.

ಆ) ಸಣ್ಣ ಕೈಗಾರಿಕ ರಂಗಕ್ಕೆ ಸೇರಿದ ಮಿನಿ ಸಿಮೆಂಟ್ ಕೈಗಾರಿಕೆಗಳಿಗೆ ಈಗಾಗಲೇ ಶೇಕಡ ೧೫ ರಷ್ಟು ಬಿರೀದಿ ದರ ಹೆಚ್ಚಳ (ಪೈಸ್ ಪ್ರಿಫರನ್ಸ್) ಸೌಲಭ್ಯವನ್ನು ನೀಡಲಾಗುತ್ತದೆ.

ಇ) ಈಗಾಗಲೇ ಮೇಲೆ (ಅ) ನಲ್ಲಿ ನಮೂದಿಸಿರುವಂತೆ ಬೇಡಿಕೆಗಳು ಸರ್ಕಾರದ ಪರಿಗಣನೆಯಲ್ಲಿವೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯೇನೆಂದರೆ, ಮಿನಿ ಸಿಮೆಂಟ್ ಕಾರ್ಖಾನೆಗಳ ಪುನಶ್ಚೇತನದ ಆಶ್ವಾಸನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು? ಏಂದು, ಅಲ್ಲದೆ, ನಾನು ಹಿಂದೆ ಇದೇ ಸದನದಲ್ಲಿ ಒಂದು ವರ್ಷ ಎರಡು ತಿಂಗಳ ಹಿಂದೆ ಗಮನ ಸೆಳೆಯುವ ಸೂಚನೆ ಮುಖಾಂತರ ಇದನ್ನು ಪ್ರಸ್ತಾಪಿಸಿದಂಥ ಸಂದರ್ಭದಲ್ಲಿ,

ಮಿನಿ ಸಿಮೆಂಟ್ ಕಾರ್ಖಾನೆಗಳ ಬಗ್ಗೆ ಮುಖ್ಯ ಮಂತ್ರಿಗಳು ನನಗೆ ಒಂದು ವಚನ ಕೊಟ್ಟಿದ್ದರು. ಏನೆಂದರೆ, 'ನಾನು ಇದರ ಬಗ್ಗೆ ಸಮಗ್ರ ಚಿಂತನೆ ನಡೆಸುತ್ತೇನೆ, ನಷ್ಟದಲ್ಲಿರತಕ್ಕ ಎಲ್ಲಾ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಬೇಕಾದರೆ ಏನೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ, ಈ ಬಗ್ಗೆ ಹೊರ ರಾಜ್ಯಗಳು ಯಾವ ರೀತಿ ರಿಯಾಯಿತಿ ಕೊಟ್ಟಿವೆ ಎಂಬುದನ್ನು ಕೂಡ ನೋಡಿ ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರುತ್ತೇನೆ' ಎಂದು ಹೇಳಿದ್ದರು. ಆದರೆ, ಈ ರೀತಿ ಹೇಳಿ ಒಂದು ವರ್ಷ ಎರಡು ತಿಂಗಳುಗಳಾಗುತ್ತಾ ಬಂದರೂ ಇಲ್ಲಿಯವರೆಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಯಾವುದೇ ರೀತಿಯ ಫಲ ಕೂಡ ಈ ಮಿನಿ ಸಿಮೆಂಟ್ ಕಾರ್ಖಾನೆಗಳಿಗೆ ದೊರಕಿಲ್ಲ. ಮಿನಿ ಸಿಮೆಂಟ್ ಕಾರ್ಖಾನೆಗಳವರು ತಮ್ಮ ಏನು ಬೇಡಿಕೆಗಳನ್ನು ಇಟ್ಟಿದ್ದರು, ಆದಕ್ಕೆ ತಾವು ಏನು ಹೇಳಿದ್ದೀರಿ, ಇನ್ನಾವುದೂ ಕೂಡ ಇದುವರೆಗೆ ಮಾಡಿಲ್ಲ. ಆದುದರಿಂದ, ಕೊನೆಯದಾಗಿ ಕೇಳುತ್ತೇನೆ, ನೀವು ಇವೊತ್ತು ಶೇಕಡ ೧೫ ರಷ್ಟು ಪ್ರೈಸ್ ಪ್ರಿಫರೆನ್ಸ್ ಅನ್ನು ಅವೇಲ್ ಮಾಡುತ್ತಿದ್ದೀರಿ. ತಾವು ಈಗ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳಾಗಿದ್ದು, ಕೈಗಾರಿಕೆ ನಡೆಸಿ ತಮಗೂ ಕೂಡ ಅನುಭವವಿದೆಯೆಂದು ನಾನು ಭಾವಿಸುತ್ತೇನೆ, ನನಗೂ ಕೂಡ ಅನುಭವವಿದೆ. ಕರ್ನಾಟಕ ರಾಜ್ಯದಲ್ಲಿ ಇವೊತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳವರು ಶೇಕಡಾ ೧೫ ರಷ್ಟು ಪ್ರೈಸ್ ಪ್ರಿಫರೆನ್ಸ್ ನಲ್ಲಿ ಯಾರಿಗಾದರೂ ರೇಟ್ ಕೊಟ್ಟಿರುವ ಒಂದು ಮಾಹಿತಿಯನ್ನು ನನಗೆ ಒದಗಿಸಿದರೆ ನಾನು ಖಂಡಿತ ವಾಗಿಯೂ ನಿಮಗೆ ಧನ್ಯನಾಗುತ್ತೇನೆ. ಇದು ಬರೀ ಪುಸ್ತಕದಲ್ಲಿರುವಂಥ ಆಶ್ವಾಸನೆಯೇ ವಿನಹ ನಿಜ ವಾಗಿಯೂ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ತಾವು ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು. ತಾವು ಹಿಂದೆ ಈ ಕುರಿತು ಕೊಟ್ಟಿರುವಂಥ ಆಶ್ವಾಸನೆಯಂತೆ ಏನು ಮಾಡಿದ್ದೀರಿ? ಯಾವೊತ್ತು ಮಾಡುತ್ತೀರಿ? ಹೇಗೆ ಮಾಡುತ್ತೀರಿ? ಏನು ಮಾಡುತ್ತೀರಿ? ಎಂಬುದನ್ನು ಹೇಳಬೇಕು.

ಶ್ರೀ ರಾಮಲಿಂಗಾರೆಡ್ಡಿ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹಲವಾರು ಮಿನಿ ಸಿಮೆಂಟ್ ಕಾರ್ಖಾನೆಗಳಲ್ಲಿ ಶೇಕಡಾ ೯೦ ರಷ್ಟು ನಾನಾ ಕಾರಣಗಳಿಗಾಗಿ ಮುಚ್ಚಲ್ಪಟ್ಟಿವೆ. ನಿನ್ನೆ ವೇಳ್ಯೆಯಲ್ಲಿ ಇದರ ಬಗ್ಗೆ ಮಾನ್ಯ ಸದಸ್ಯರಾದ ಡಾ॥ ಎ. ಆರ್. ತಂಗಾರವರು ಪ್ರಶ್ನೆ ಕೇಳಿದ್ದರು. ಇದರ ಕುರಿತು ನಾನು ಮಾತನಾಡುತ್ತಾ, ಮಿನಿ ಸಿಮೆಂಟ್ ಕಾರ್ಖಾನೆಗಳವರು ಒಂದು ಸಂಘ ಮಾಡಿಕೊಂಡು ಸರ್ಕಾರಕ್ಕೆ ರೆಪ್ರಸೆಂಟ್ ಮಾಡಿಕೊಂಡ ನಂತರ ಒಂದು ರಾಜ್ಯ ಮಟ್ಟದ ಸಮಿತಿ ರಚಿಸಿದೆವು, ಅದು ರಿಹ್ಯಾಬಿಲಿಟೇಷನ್ ಕಮಿಟಿ ಎಂದು, ಈಗ ಅದರ ಮುಂದೆ ಈ ವಿಷಯ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮಿನಿ ಸಿಮೆಂಟ್ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಏನೇನು ಸವಲತ್ತು, ಗಳನ್ನು ಒದಗಿಸಬೇಕು, ಮತ್ತು ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೋ ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ ಬಿ. ಜಯಚಂದ್ರ.—ನಾನು ಕೇಳಿರತಕ್ಕಂಥ ಪ್ರಶ್ನೆಗಳು ಬಹಳ ಸುಲಭವಾದುದು. ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾದರೆ ಈ ಕಾರ್ಖಾನೆಗಳಿಗೆ ಯಾವುದೇ ರೀತಿಯ ಫೈನಾನ್ಸಿಯಲ್ ಕಮಿಟ್‌ಮೆಂಟ್ ಇರಬಾರದು. ಈಗ ವಿದ್ಯುತ್ ಖಾತೆ ಸಚಿವರು ಸದನದಲ್ಲಿದ್ದಾರೆ. ಈಗ ರಾಜ್ಯದಲ್ಲಿ ಕೇವಲ ೫೦-೪೦ ಇಂತಹ ಕೈಗಾರಿಕೆಗಳಿವೆ. ಇವುಗಳಿಗೆ ಪ್ರತ್ಯೇಕ ಇಂಡಸ್ಟ್ರಿಯಲ್ ಫೀಡರ್ಸ್ ಕೊಡುವುದಕ್ಕೆ ಆಷ್ಟೇನೂ ಇನ್‌ವೆಸ್ಟ್‌ಮೆಂಟ್ ಬೇಕಾಗುವುದಿಲ್ಲ. ಇದರ ಬಗ್ಗೆ ಸದನದಲ್ಲಿ ಈ ಸಂದರ್ಭದಲ್ಲೇ ನೀವು ಉತ್ತರ ಕೊಡಬಹುದು. ಅದೇ ರೀತಿ ಪ್ರೈಸ್ ಪ್ರಿಫರೆನ್ಸ್, ಪರ್ಚೇಸ್ ಪ್ರಿಫರೆನ್ಸ್, ಯಾವತ್ತೇ ಪರ್ಚೇಸ್ ಮಾಡುತ್ತೀರಿ, ಅದನ್ನು ಕೊಡುವಾಗ ಆದ್ಯತೆ ಮೇಲೆ ಕೊಡಿ. ಪೇಮೆಂಟ್ ಕೊಡುವಾಗಲೂ ಆಷ್ಟೆ, ಒಂಭತ್ತು ತಿಂಗಳು ಬಿಟ್ಟು ಕೊಡುವ ಬದಲು ಇವೊತ್ತೇ ಕೊಡಿ, ಇಷ್ಟು ಕೊಟ್ಟರೆ ಸಾಕಾಗುತ್ತದೆ. ಮತ್ತು 'ರಿಹ್ಯಾಬಿಲಿಟೇಷನ್ ಕಮಿಟಿ' ಎನ್ನುವ ಒಂದು ಮಾತನ್ನು ಹೇಳಿದಿರಿ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಿಗೆ ಬಿ. ಐ. ಫ್ಹ್. ಆರ್. ಎಂದು ಒಂದು ಕಮಿಟಿ ಇದೆ. ಸಣ್ಣ ಕೈಗಾರಿಕೆಗಳಿಗೆ ಮತ್ತು ಇಡೀ ರಾಜ್ಯಕ್ಕೆ ಆದು ಸಮಗ್ರವಾಗಿ ಅಪ್ಲೈಯಾಗುತಕ್ಕದು, ಅದನ್ನು ರಿಯಾಬಿಲಿಟೇಷನ್ ಮಾಡುವುದಕ್ಕೆ ಇದುವರೆಗೆ ಸರ್ಕಾರ ಯಾವುದೇ ರೀತಿಯಾದಂಥ ಸಮಿತಿಯನ್ನು ನೇಮಕ ಮಾಡಿಲ್ಲ. ಆ ಸಮಿತಿಯನ್ನು ಯಾವಾಗ ನೇಮಕ ಮಾಡುತ್ತೀರಿ ? ಅದು ಯಾವ ಸಭೆಯ ಮುಂದಿದೆ ಎಂಬ ಬಗ್ಗೆ ದಯವಿಟ್ಟು ಹೇಳಬೇಕು. ನನಗೆ ಗೊತ್ತಿರುವಂತೆ ಮುಖ್ಯ ಮಂತ್ರಿಗಳು ಏನೇನು ಆಶ್ವಾಸನೆಗಳನ್ನು ಕೊಟ್ಟರೋ, ಅದರ ಬಗ್ಗೆ ಏನೇನಾಯಿತು ಎಂಬ ಬಗ್ಗೆ ಆ ಸಮಿತಿಯವರು ಎಲ್ಲವನ್ನೂ ಪರಿಶೀಲನೆ ಮಾಡಿ ಅಂತಿಮವಾಗಿ ಅದು ಹಣಕಾಸಿನ ಇಲಾಖೆಯ ಮುಂದೆ ಹೋಗಿದೆ.

ನಾನೂ ಕೂಡ ಅನೇಕಸಾರಿ ಮುಖ್ಯ ಮಂತ್ರಿಗಳ ಹತ್ತಿರ ಇದರ ಬಗ್ಗೆ ವಿಸ್ತಂತಿಸಿಕೊಂಡಿದ್ದೇನೆ. ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಹೇಳುತ್ತೇರೆಂದು ಹೇಳಿದ್ದೀರಿ, ಆದರೆ ಎಲ್ಲೂ ಸಹ ಇದರ ಬಗ್ಗೆ ಹೇಳಲಿಲ್ಲ. ಬಜೆಟ್ ಭಾಷಣದಲ್ಲಿ ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ ಚರ್ಚೆ ಮಾಡಿದ್ದೀರಿ. ಆದರೆ ಇದನ್ನು ಪುನಶ್ಚೇತಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ನೀವು ಇದರ ಬಗ್ಗೆ ನಿರ್ದಿಷ್ಟವಾಗಿ ಏನಾಗುತ್ತದೆ ? ಯಾವ ರೀತಿ ಕೊಡುತ್ತೀರಿ ? ಎನ್ನುವುದನ್ನು ಈಗಲೇ ಹೇಳಲು ಸಾಧ್ಯವಿದೆ. ಇದಕ್ಕೆ ದಯವಮಾಡಿ ಉತ್ತರವನ್ನು ಕೊಡಬೇಕು.

ಶ್ರೀ ರಾಮಲಿಂಗರೆಡ್ಡಿ.—ಈಗ ಸಮಿತಿಯು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದೆ ಅದು ತಮಗೂ ಗೊತ್ತಿದೆ. ಆ ವರದಿ ಸರ್ಕಾರದ ಮುಂದೆ ಇದೆ. ಇನ್ನು ಒಂದು ತಿಂಗಳಿನಲ್ಲಿ ಇವನ್ನು ಯಾವ ರೀತಿಯಲ್ಲಿ ಪುನಶ್ಚೇತನ ಮಾಡಬೇಕೆಂದು ಸಮಿತಿ ವರದಿಕೊಟ್ಟಿದೆ ಅದರಂತೆ ನಡೆದು ಕೊಳ್ಳುತ್ತೇವೆ. ತಾವು ಹೇಳಿರುವ ಎಲ್ಲಾ ಸಮಸ್ಯೆಗಳನ್ನು ಸಹ ನಾನು ಒಪ್ಪಿಕೊಳ್ಳುತ್ತೇನೆ. ಆ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಸಮಿತಿಯವರು ಕೊಟ್ಟಿದ್ದಾರೆ. ಒಂದು ತಿಂಗಳಿನಲ್ಲಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಸಮಿತಿಯವರು ಕೊಟ್ಟಿರುವ ಎಲ್ಲಾ ತೀರ್ಮಾನವನ್ನು ತಾವು ಒಪ್ಪಿಕೊಂಡರೆ ಸಾಕು.

ಶ್ರೀ ರಾಮಲಿಂಗಾರೆಡ್ಡಿ.—ಎಲ್ಲವನ್ನೂ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಸಿಮೆಂಟ್ ಕಾರ್ಖಾನೆಗಳ ಪುನಶ್ಚೇತನ ಮಾಡುವುದಕ್ಕೆ ಏನೇನು ಸಾಧ್ಯತೆಗಳಿವೆಯೋ ಅದನ್ನೆಲ್ಲಾ ಮಾಡುತ್ತೇವೆಂದು ಹೇಳುತ್ತೇನೆ.

"ರಾಮತೀರ್ಥ" ಪ್ರವಾಸಿ ಕೇಂದ್ರದ ಅಭಿವೃದ್ಧಿ

೨೭೨(ಶೂನ್ಯ) ಶ್ರೀ ಕೆ. ಸಿ. ಮೋಡಗೇಕರ್ ದೇಸಾಯಿ (ಹಿರೇಬಾಗೆವಾಡಿ).—ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಳಗಾಂ ತಾಲ್ಲೂಕಿನ ಕೊಯಿರಬೊವನ್ನಿಹಳ್ಳಿಯ ರಾಮತೀರ್ಥ ಪ್ರವಾಸಿ ಕೇಂದ್ರದ ಅಭಿವೃದ್ಧಿಗೆ ಬೆಳಗಾಂ ಜಿಲ್ಲಾ ಪರಿಷತ್ತು ಹಾಗೂ ರಾಜ್ಯ ಸರ್ಕಾರ ಕಾರ್ಯಗತ ಯೋಜನೆಯನ್ನೇನಾದರೂ ರೂಪಿಸಿದೆಯೇ ?

ಆ) ಹಾಗಿದ್ದಲ್ಲಿ ಇದರ ಅಭಿವೃದ್ಧಿಗೆ ಮುಂಬರುವ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆಯೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದು ಕೊರತೆಗಳ ರಾಜ್ಯಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

SRI K. C. MODAGEKAR DESAI.—Speaker. Sir, Whether it is a fact that 2 years back the Hon'ble Tourism Minister had declared that this Ramatirth in Konbargi village is a tourist centre ? Then I am going to ask another supplementary. Atlast the primary essential work should be taken by the government. It is only one kiilometre from Konabargi to Ramtirth. Therefore whether the primary essential work will to be taken up early ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಸನ್ಮಾನ್ಯ ಅಧ್ಯಕ್ಷರೆ, ರಾಮತೀರ್ಥ ಎಂಬುದು ಬೆಳಗಾಂ ಜಿಲ್ಲೆಯಲ್ಲಿದೆ. ಇದೇ ರಾಮತೀರ್ಥಗಳು ಬೆಳಗಾಂನಲ್ಲಿ ಐದು ಇವೆ. ನಾವು ಪ್ರವಾಸೋದ್ಯಮ ನೀತಿಯಲ್ಲಿ "ಕೊವರಬೆಂಜಿ" ರಾಮತೀರ್ಥವನ್ನು ಕೂಡ 'ಸಿ' ಗ್ರೂಪ್‌ನಲ್ಲಿ ಅಳವಡಿಸಿ, ಅದಕ್ಕೆ ಯಾರಾದರು ಖಾಸಗಿಯವರು ಮುಂದೆ ಬಂದರೆ ಶೇಕಡ ೨೫ ರಷ್ಟು ಸಬ್ಸಿಡಿಯನ್ನು ಮತ್ತು ಇನ್ನಿತರೆ ರಿಯಾಯಿತಿ